**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ**

ಸಿ.ಸಿ. ನಂ.9/2022

CW-3/PW-3

| | | |
|---|---|---|
| ಹೆಸರು | ಃ- | ಲೋಕೇಶ್ ಮೂರ್ತಿ |
| ತಂದೆ ಹೆಸರು | ಃ- | ರಾಜಶೇಖರಯ್ಯ |
| ವಯಸ್ಸು | ಃ- | 75 ವರ್ಷ |
| ವೃತ್ತಿ | ಃ- | - |
| ವಾಸ ಸ್ಥಳ | ಃ- | ಬಿಡದಿ |
| ದಿನಾಂಕ | ಃ- | 10-07-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಪ್ರಾಸಾ-1 ನನ್ನ ಸ್ನೇಹಿತರು. ಪ್ರಾಸಾ-2 ಗೊತ್ತು. 2021 ನೇ ಇಸವಿಯಲ್ಲಿ ಸಂಜೆ 7.00 ರಿಂದ 7.30 ಗಂಟೆಗೆ ವಾಕಿಂಗ್ ಮುಗಿಸಿ ವಾಪಸ್ ಮನೆಗೆ ನಾನು, ಚಾಸಾ-1 ಮತ್ತು ಚಾಸಾ-2 ರವರು ಇಂದಿರಾನಗರದ 6 ನೇ ಕ್ರಾಸ್ ಬಳಿ ಹೋಗುತ್ತಿದ್ದಾಗ ಹಿಂಬದಿಯಿಂದ ಒಬ್ಬ ಆಸಾಮಿ ಬಂದು ಚಾಸಾ-2 ರವರ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಓಡಿ ಹೋದ. ಪ್ರಾಸಾ-1 ರವರು ಆತನನ್ನು ಬೆನ್ನಟ್ಟಿದ್ದರು, ಆತ ಸಿಗಲಿಲ್ಲ. ಪೊಲೀಸರು ನಂತರ ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು. ಸ್ಥಳದಲ್ಲಿ ಮಹಜರ್ ಮಾಡಿಕೊಂಡರು. ಮಹಜರ್ ಮಾಡಿದ್ದು ಘಟನೆ ನಡೆದ ಮಾರನೇ ದಿನ. ಆಗ ಸಮಯ ಬೆಳಗ್ಗೆ 11.00 ಗಂಟೆ. ಮಹಜರನ್ನು ಅರ್ಧ ಗಂಟೆ ಮಾಡಿದರು. ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಿರುತ್ತೇನೆ.

<u>ಸಿ.ಸಿ. ನಂ.9/2022</u>
CW-3/PW-3

2. ಪೊಲೀಸರು ನನ್ನನ್ನು, ಲಕ್ಷ್ಮೀಶನನ್ನು ಮತ್ತು ಚಾಸಾ-1 ರವರನ್ನು ಪೊಲೀಸ್ ಠಾಣೆಗೆ ಕರೆಸಿದ್ದರು. ಪೊಲೀಸರು ಪೊಲೀಸ್ ಠಾಣೆಯಲ್ಲಿ ಚಿನ್ನದ ಸರದ ಫೋಟೋ ತೆಗೆದು ಚಾಸಾ-1 ರವರ ವಶಕ್ಕೆ ಬಿಟ್ಟಿರುತ್ತಾರೆ. ಆ ಕಾಲಕ್ಕೆ ಮಹಜರ್ ಮಾಡಿದ್ದು, ಸದರಿ ಮಹಜರನ್ನು ನಿಪಿ-4 ಎಂದು, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಿರುತ್ತೇನೆ. ಸದರಿ ಚಿನ್ನದ ಸರದ ಫೋಟೋವನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಚಿನ್ನದ ಸರದ ಫೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಚಿನ್ನದ ಸರವನ್ನು ಕಿತ್ತುಕೊಂಡು ಹೋದ ಆಸಾಮಿ ನ್ಯಾಯಾಲಯದ ಮುಂದೆ ಆರೋಪಿ ಸ್ಥಾನದಲ್ಲಿ ನಿಂತಿದ್ದಾರೆ.

<u>ಪಾಟೀ ಸವಾಲು ಆರೋಪಿ ಪರಃ-</u>

ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.